ಕಳೆಯಲು ಅವನು ತನ್ನ ಅಪ್ಪ ಅಮ್ಮಂದಿರೊಂದಿಗೆ ಬರುತ್ತಾನೆ. ಆ ಧರ್ಮಾಧಿಕಾರಿ ಮತ್ತವನ ಹೆಂಡತಿ ತಮ್ಮ ಭಾವೀ ಅಕಾಡೆಮಿ ವಿದ್ಯಾರ್ಥಿಯ ಬಗ್ಗೆ ಜಂಬ ಕೊಚ್ಚಿಕೊಳ್ಳಲು ಕೆಲ ಅತಿಥಿಗಳನ್ನು ಚಹಾ ಕೂಟಕ್ಕೆ ಆಹ್ವಾನಿಸುತ್ತಾರೆ. ಬಂದಿದ್ದವರೆಲ್ಲಾ ಅವರ ಮಗನ ಬಗೆಗಿನ ಅದ್ಭುತ ಭವಿಷ್ಯದ ಬಗ್ಗೆ ಕೊಂಡಾಡುತ್ತಾರೆ. ಥರಾವರಿ ಜ್ಯಾಮುಗಳನ್ನು ಸವಿಯುತ್ತಾರೆ. ಅವರ ಮಾತಿನಿಂದ ಹುರುಪುಗೊಂಡ ಧರ್ಮಾಧಿಕಾರಿಯ ಖುಷಿ ಇಮ್ಮಡಿಸಿ ಗ್ರಾಮೋಫೋನನ್ನು ಹಾಕುತ್ತಾನೆ. ಮೊದಮೊದಲು ಬುಸುಗುಟ್ಟಿದ ಅದು ಕ್ರಮೇಣ ಜೋರು ದನಿಯಲ್ಲಿ ಅಬ್ಬರಿಸತೊಡಗುತ್ತದೆ. ಅದರ ಗಲಾಟೆಗೆ ಎಲ್ಲದೂ ನಿಶ್ಶಬ್ದಗೊಂಡು, ಅಲ್ಲಿದ್ದವರೆಲ್ಲಾ ಖುಷಿಯ ನಗೆಯನ್ನು ತುಟಿಗಳಲ್ಲಾಡಿಸಿಕೊಂಡು, 'ಅಲಾಂಗ್ ದ ರೋಡ್‌ವೆ'ಯನ್ನು ಕೇಳತೊಡಗುತ್ತಾರೆ... ಆಗ ಇದ್ದಕ್ಕಿದ್ದಂತೆ ಆ ರೂಮಿನೊಳಕ್ಕೆ ನುಗ್ಗಿದ ಅಡಿಗೆಯವಳ ಮಗ ಕಾಲುಗಳನ್ನು ನೆಲಕ್ಕೆ ಜೋರಾಗಿ ಬಡಿಯುತ್ತಾ, ಒಡ್ಡೊಡ್ಡಾಗಿ ಸಮಯದ ಹಂಗಿಲ್ಲದೆ ಕಣಿಯತೊಡಗುತ್ತಾನೆ. ಆ ಮೂಲಕ ಅಲ್ಲಿದ್ದವರ ಗಮನಸೆಳೆಯಬಹುದೆಂಬ ಮೂರ್ಖ ಆಲೋಚನೆಯಿಂದಾಗಿ ಅದರವ್ವ, 'ಓಡು ಪುಟ್ಟ, ಓಡಿ ಡ್ಯಾನ್ಸ್ ಮಾಡು,' ಅಂತ ಆ ಪುಟ್ಟ ಹುಡುಗನ ಕಿವಿಯಲ್ಲಿ ಉಸುರಿ ಕಳಿಸಿರುತ್ತಾಳೆ.

ಈ ಅನಿರೀಕ್ಷಿತ ನಡೆ ಎಲ್ಲರನ್ನೂ ಕಕ್ಕಾಬಿಕ್ಕಿಯಾಗಿಸುತ್ತದೆ. ಆದರಿದು ಧರ್ಮಾಧಿಕಾರಿಯ ಮಗನ ಮುಖಕ್ಕೆ ಕೆಂಪೇರುವಂತೆ ಮಾಡಿ, ಅವನು ಒಮ್ಮೆಗೇ ಹುಲಿಯಂತೆ ಆ ಪುಟ್ಟ ಹುಡುಗನ ಮೇಲೆ ಎಗರಿ, ಅವನನ್ನು ಒಮ್ಮೆಗೇ ರೂಮಿನಿಂದಾಚೆಗೆ ತೂಗಿ ಎಸೆಯುತ್ತಾನೆ. ಆ ರಭಸಕ್ಕೆ ಆ ಹುಡುಗ ಗಿರ್ರನೆ ತಿರುಗಿಸಿಬಿಟ್ಟ ಬುಗುರಿಯಂತೆ ಪಡಸಾಲೆಯಲ್ಲಿ ಉರುಳುರುಳಿ ಬೀಳುತ್ತಾನೆ.

ಮರುದಿನ ತಮ್ಮ ಮಗನ ತಗಾದೆಯ ಮೇರೆಗೆ ಧರ್ಮಾಧಿಕಾರಿ ಮತ್ತವನ ಹೆಂಡತಿ ಅಡಿಗೆಯವಳನ್ನು ಕೆಲಸದಿಂದ ಕಿತ್ತು ಹಾಕಿದರು. ದಯಾಗುಣ ಹಾಗೂ ಮರುಗುವ ಗುಣದವರಾದ ಅವರು ಅವಳಿಗೆ ತುಂಬಾ ದಿನಗಳಿಂದಲೂ ಒಗ್ಗಿಕೊಂಡಿದ್ದರು. ಅವಳ ತಾಳ್ಮೆ ಹಾಗೂ ವಿಧೇಯತೆ ಅವರಿಗೆ ತುಂಬಾ ಹಿಡಿಸಿತ್ತು. ಹಾಗಾಗಿ, ಅವರು ಉದಾರತೆ ತೋರುವಂತೆ ಮಗನನ್ನು ಪರಿಪರಿಯಾಗಿ ಕೇಳಿಕೊಂಡರು. ಆದರವನು ಅವರ ಮಾತುಗಳಿಗೆ ಕರಗಲಿಲ್ಲ. ಅವರು ಅವನನ್ನು ಎದುರು ಹಾಕಿಕೊಳ್ಳುವ ಧೈರ್ಯ ತೋರಲಿಲ್ಲ. ಸಂಜೆಯ ಹೊತ್ತಿಗೆ, ಆ ಅಡಿಗೆಯವಳು ಮೆಲ್ಲಗೆ ಅಳುತ್ತಾ, ಒಂದು ಕೈಯ್ಯಲ್ಲಿ ಗಂಟೊಂದನ್ನೂ ಮತ್ತೊಂದರಲ್ಲಿ ಮಗನ ಪುಟ್ಟ ಕೈಯ್ಯನ್ನೂ ಹಿಡಿದುಕೊಂಡು ಹಿತ್ತಲಿನಿಂದ ನಡೆದು ಹೋದಳು.

ಅದಾದ ಮೇಲೆ ಪ್ರತೀ ಬೇಸಿಗೆಯಲ್ಲೂ ಸುತ್ತಲ ಹಳ್ಳಿಗಳಲ್ಲಿ ಮಗನೊಂದಿಗೆ ತಿರುಪೆಗಾಗಿ ತಿರುಗಿದಳು. ಅವಳು ತೊಟ್ಟ ಬಟ್ಟೆಗಳೆಲ್ಲಾ ಚಿಂದಿಯಾದವು. ಸೂರ್ಯನ ಬೆಳಕಿಗೆ, ಗಾಳಿಯ ಹೊಡೆತಕ್ಕೆ ಹೈರಾಣಾದಳು. ಬರಬರುತ್ತಾ ಬರೀ ಮೂಳೆ ಚಕ್ಕಳವಾದಳು. ಆದರೂ ದಣಿವುಗೊಳ್ಳಲಿಲ್ಲ. ಗೋಣೀ ಚೀಲದ ಬ್ಯಾಗೊಂದನ್ನು ಹೆಗಲಲ್ಲಿಟ್ಟುಕೊಂಡು ಬರಿಗಾಲಲ್ಲಿ ನಡೆದಳು. ಊರುಗೋಲೊಂದನ್ನು ಆಸರೆಯಾಗಿಸಿಕೊಂಡು ಹಳ್ಳಿ ಹಳ್ಳಿಗಳ ಪ್ರತಿಯೊಂದು ಗುಡಿಸಲುಗಳ ಮುಂದೆಯೂ ಬಾಗಿ ಬೇಡಿದಳು. ತನ್ನ ಎಳೆಯ ಭುಜಗಳಿಗೆ ತಾನೂ ಒಂದು ಬ್ಯಾಗನ್ನು ನೇತಾಕಿಕೊಂಡು, ಅವಳ ಹಳೆಯ ಶೂಗಳನ್ನು ಹಾಕಿಕೊಂಡು, ಆ ಪುಟ್ಟ ಹುಡುಗ ಅವಳ ಹಿಂದಿಂದೆಯೇ ನಡೆದ.

ಹುಡುಗ ನೋಡಲು ಅಷ್ಟೇನು ಚಂದವಿರಲಿಲ್ಲ. ಸಪಾಟಾದ ದಡಿ ತಲೆ, ಪುಟ್ಟ ದದ್ದು ಮೂಗು, ಅಗಲ ಮೂಗಿನ ಹೊಳ್ಳೆಗಳು, ಹೊಳೆಯುವ ಕಂದುಕಾಯಿ ಬಣ್ಣದ ಕಣ್ಣುಗಳು. ಆದರೂ ಅವನ ಮಾಸದ ನಗುವಿನಲ್ಲಿ ಎಂಥದೋ ಮಾಧುರ್ಯವಿತ್ತು.

ಅಲಾಂಗ್ ದ ರೋಡ್‌ವೆ–ಪ್ರಖ್ಯಾತ ರಷ್ಯನ್ ಜನಪದ ಹಾಡು

**(ಸೆಪ್ಟೆಂಬರ್ 28, 1940)**